# ಲಾರ್ವೆನ್ಸ್ ಪಬ್ಲಿಕ್ ಶಾಲೆ

ಆನೇಕಲ್ ರಸ್ತೆ ಚಂದಾಪುರ

ಸಂಕಲನಾತ್ಮಕ ಮೌಲ್ಯಮಾಪನ- ಮಾರ್ಚ್ ೨೦೨೦

ತರಗತಿ: ೯ನೇ 'ಬಿ'

ವಿಷಯ ; ಪ್ರಥಮ ಭಾಷೆ ಕನ್ನಡ

ಸಮಯ : 3 ಗಂಟೆ 15 ನಿಮಿಷ

ವಿಷಯ ಸಂಕೇತ : 01K

ಗರಿಷ್ಠ ಅಂಕಗಳು : 100

---

**I.** ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6*1=6

1. ಈ ಕೆಳಗೆ ನೀಡಿರುವ ಪದಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಇವನೊಬ್ಬ (ಬಿ) ಹುಲಿಯಿಂದ
   (ಸಿ) ಗುರುವನ್ನು (ಡಿ) ಹುಲಿದೊಗಲು
2. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಎ) ಕರ್ಮಧಾರಯ (ಬಿ) ದ್ವಿಗು
   (ಸಿ) ತತ್ಪುರುಷ (ಡಿ) ಕ್ರಿಯಾ
3. 'ಮಹರ್ಷಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;
   (ಎ) ಸವರ್ಣದೀರ್ಘ (ಬಿ) ಗುಣ
   (ಸಿ) ವೃದ್ಧಿ (ಡಿ) ಯಣ್
4. 'ಸಂಪ್ರದಾನ' ಕಾರಕಾರ್ಥವು ಈ ವಿಭಕ್ತಿಯದ್ದಾಗಿದೆ;
   (ಎ) ಚತುರ್ಥಿ (ಬಿ) ತೃತೀಯ
   (ಸಿ) ಸಪ್ತಮಿ (ಡಿ) ಪಂಚಮಿ
5. ಇವುಗಳಲ್ಲಿ ಅಕರ್ಮಕ ಧಾತುವಿಗೆ ಉದಾಹರಣೆಯಾದದ್ದು;
   (ಎ) ಹೊಳೆ (ಬಿ) ಓದು
   (ಸಿ) ನೆಡು (ಡಿ) ಬೆಳೆ
6. 'ಹೋದನು' ಕ್ರಿಯಾಪದವು ಈ ಕಾಲರೂಪದಲ್ಲಿದೆ;
   (ಎ) ವರ್ತಮಾನ (ಬಿ) ಭೂತ
   (ಸಿ) ಭವಿಷ್ಯತ್ (ಡಿ) ಭೂತಭವಿಷ್ಯ

**II.** ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4*1=4

7. ನಿತ್ಯ : ಅನಿತ್ಯ : : ಸತ್ಯ : ..................
8. ಅವನಿ : ಭೂಮಿ : : ಎಕ್ಕಲ : ............................................
9. ಸಕ್ಕದ : ಸಂಸ್ಕೃತ : : ಸತ್ತಿಗೆ : ..............................................
10. ಷಟ್ಪದಿ : ಆರು ಪಾದಗಳು : : ಕಂದ ಪದ್ಯ : ..................................................

**III.** ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 7*1=7

11. ಜಯಪುರದಲ್ಲಿರುವ ಹಳೆಯ ಕಾಲದ ಖಗೋಳ ವಿಜ್ಞಾನ ಪರಿಶೀಲನಾಲಯದ ಹೆಸರೇನು?
12. ಗೊರೂರು ರಾಮಸ್ವಾಮಿ ಅವರ ಪ್ರಕಾರ ಮೌಲ್ವಿ ಹಿಡಿದಿದ್ದ ಪುಸ್ತಕದ ಹೆಸರೇನು?
13. ದುರ್ಯೋಧನನು ದುರ್ಜಯನಿಗೆ ಏನೆಂದು ಬುದ್ಧಿವಾದ ಹೇಳಿದನು?

14. ಶಿವನು ಗಿರಿಜೆಯನ್ನು ಕುರಿತು "ನನ್ನೊಡನೆ ಬರುವುದು ಬೇಡ" ಎಂದು ಹೇಳಲು ಕಾರಣವೇನು?
15. ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ವೀರಧ್ವನಿ ಹೇಗೆ ಏರಬೇಕು?
16. ಕವಿ ಅರವಿಂದ ಮಾಲಗತ್ತಿ ಅವರ ಪ್ರಕಾರ ಮನೆಯ ಬಾಗಿಲು ಯಾರಿಗಾಗಿ ತೆರೆದಿಹುದು?
17. ಪುಟ್ಟಹಕ್ಕಿಯು ಗೀತೆಯನ್ನು ಹಾಡುತ್ತಾ ಯಾರನ್ನು ಸ್ವಾಗತಿಸುತ್ತದೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

18. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?
19. 'ಹರಲೀಲೆ' ಪಾಠದಲ್ಲಿ ಹರಿಹರನು ವೃದ್ಧ ಮಹೇಶ್ವರನನ್ನು ಹೇಗೆ ವರ್ಣಿಸಿದ್ದಾನೆ?
20. ದುರ್ಯೋಧನನು "ಪಾಂಡವರು ತನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪ" ಎನ್ನುವುದನ್ನು ಹೇಗೆ ಸಮರ್ಥಿಸಿದ್ದಾನೆ?
21. ಕವಿ ಕಯ್ಯಾರ ಕಿಞ್ಞಣ್ಣ ರೈ ಅವರು "ಈ ಹಾಡು ಹೊಸಹಾಡು" ಎಂದು ಹೇಳಲು ಕಾರಣವೇನು?
22. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಹೇಗೆ ಕ್ರಮಕೈಗೊಂಡನು?
23. ಕವಿ ಸು. ರಂ. ಎಕ್ಕುಂಡಿ ಅವರ ಪ್ರಕಾರ ಪಾರಿವಾಳಗಳ ಆನಂದಕ್ಕೆ ಕಾರಣವೇನು?
24. ಲೇಖಕಿ ಕೆ. ನೀಲಾ ಅವರ ಪ್ರಕಾರ ನಾಗರ ಪಂಚಮಿಯ ದಿನ ಬಸವ ಕೇಂದ್ರದವರು ಹೇಗೆ ಜನರನ್ನು ಜಾಗೃತಿಗೊಳಿಸುತ್ತಿದ್ದರು?
25. ಕವಯಿತ್ರಿ ಇಂದುಮತಿ ಲಮಾಣಿ ಅವರು ತಮ್ಮ ಆಸೆಗಳನ್ನು ಹೇಗೆ ವ್ಯಕ್ತಪಡಿಸಿದ್ದಾರೆ?
26. ಪಂಢರೀಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?
27. ದುರ್ಗಪ್ಪನು ಶಂಕರಣ್ಣನಿಗೆ ಕುಲದ ಬಗೆಗೆ ಹೇಗೆ ವಿವರಿಸುತ್ತಾನೆ?

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2*3=6**

28. ಗೊರೂರು ರಾಮಸ್ವಾಮಿ ಅಯ್ಯಂಗಾರ್
29. ಜನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

30. ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1*3=3**

31. ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1*3=3**

32. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?

**ಅಥವಾ**

ಹಿತ್ತಲ ಗಿಡ ಮದ್ದಲ್ಲ.

IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18

33. "ಚಾವಡಿಗಳು ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ."
34. "ಏಳ್ಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ನಿನ್ನ ಪಾದವೇ ಗತಿಕಣಪ್ಪ ಶರಣು ಶರಣಾರ್ಥಿ"
35. "ಮಾನವತೆಯೇ ವಿಶ್ವ ಅನುಸರಿಸಬೇಕಾದ ಧರ್ಮ."
36. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"
37. "ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು"
38. "ಬುದ್ಧನೆಂದರೆ ಕರುಣೆ ಬುದ್ಧನೆಂದರೆ ಬೆಳಕು"

X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1*4=4

39. ಪದನರಿದು ......................

.......................................................................

............................................

.............................................. ಮತಿಗಳ್

**ಅಥವಾ**

ಮಲ್ಲಿಗೆ ................................

.......................................................................

............................................

.............................................. ನಾಡೊಳ್

XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. 1*4=4

40. ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿ ಜನ್ಮಕ ಬೇಡ ।
ಹೀನ ಮನುಷ್ಯನ ಸ್ನೇಹ ಮಾಡಿ
ನೀನು ಕೆಡಲಿ ಬೇಡ ॥

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8

41. ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಕಾರಣ ಹಾಗೂ ಪರಿಣಾಮವನ್ನು ವಿವರಿಸಿ.

**ಅಥವಾ**

ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಮಾನದ ಬಗ್ಗೆ ವಿವರಿಸಿ.

42. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ ಗಾನರಾಣಿಯರು ಹೇಳಿದ ಮಾತುಗಳನ್ನು ವಿವರಿಸಿ.

**ಅಥವಾ**

ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿಬರೆಯಿರಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4 (2+2)

43. ಗುಬ್ಬಚ್ಚಿ ಬಳಗಕ್ಕೆ ಸೇರಿದ ಪ್ರಸಿದ್ಧ ಹಕ್ಕಿ ಗೀಜುಗ. ಕೊಕ್ಕು ಮತ್ತು ಆಕಾರಗಳಲ್ಲಿ ಇದು ಗುಬ್ಬಚ್ಚಿಯನ್ನೇ ಹೋಲುವುದಾದರೂ ಮೈ ಪ್ರಧಾನವಾಗಿ ಹಳದಿ ಬಣ್ಣವೂ, ಕಪ್ಪುಬಣ್ಣದ ಕಪಾಲವೂ ಇರುವುದರಿಂದ ಇದನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಗೀಜುಗವು ಕುಲಾವಿಯಾಕಾರದ ಆಕರ್ಷಕವಾದ ಗೂಡುಗಳನ್ನು ನೇಯುತ್ತದೆ. ಗೂಡು ಕಟ್ಟುವಾಗ, ಸ್ಥಳ ಆಯ್ಕೆ ಮಾಡುವಾಗ ಗೀಜುಗ ಹಕ್ಕಿ ಅಸಾಧಾರಣ ಬುದ್ಧಿವಂತಿಕೆ ತೋರಿಸುತ್ತದೆ. ಗೂಡು ಕಟ್ಟಲು ಪ್ರಶಸ್ತವಾದ ಎತ್ತರದ ಮರ ಸಿಗದಿದ್ದಾಗ ಇವು ಗಿಡಗಳ ಕೊಂಬೆಗಳಲ್ಲಿ ಗೂಡು

ಕಟ್ಟುತ್ತವೆ. ಆದರೆ ನೆಲಮಟ್ಟದಲ್ಲಿ ಹಾಗೆ ಗೂಡು ಕಟ್ಟುವಾಗಲೆಲ್ಲ ಗೀಜುಗ ಕೆಳಗಡೆ ಆಳವಾದ ಬಾವಿಯ, ನದಿ ಕೆರೆಗಳ ಕಮರಿಯೋ ಇರುವೆಡೆ ಬಾಗಿರುವ ಕೊಂಬೆಯ ತುದಿಗೆ ಗೂಡು ಕಟ್ಟುತ್ತದೆ. ಕೆಳಗಡೆ ಆಳವಾದ ಪ್ರಪಾತ ಇರುವುದರಿಂದ ಸ್ವಲ್ಪ ಆಯ ತಪ್ಪಿದರೂ ಕೊಂಬೆ ಸಮೇತ ಪಾತಾಳಕ್ಕೆ ಬೀಳುವ ಭಯದಲ್ಲಿ ಅದು ಗೂಡು ಕಟ್ಟಿರುವ ಬಳುಕುವ ಕೊಂಬೆಯ ಮೇಲೆ ಹೋಗಿ ಮೊಟ್ಟೆಗಳನ್ನಾಗಲೀ ಮರಿಗಳನ್ನಾಗಲೀ ಕದಿಯಲು ಬೆಕ್ಕು, ಹಾವು ಮೊದಲಾದ ಯಾವ ಪ್ರಾಣಿಯೂ ಧೈರ್ಯ ಮಾಡುವುದಿಲ್ಲ.

ಪ್ರಶ್ನೆಗಳು :

43. ಅ) ಗೀಜುಗಗಳು ಗೂಡು ಕಟ್ಟುವಾಗ ತೆಗೆದುಕೊಳ್ಳುವ ಎಚ್ಚರಿಕೆಗಳೇನು?

43. ಬ) ಗುಬ್ಬಚ್ಚಿಗೂ ಗೀಜುಗನಿಗೂ ಇರುವ ವ್ಯತ್ಯಾಸಗಳೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1*5=5**

44. ನಿಮ್ಮನ್ನು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಹೊಮ್ಮರಗಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸುರಭಿ' ಎಂದು ಭಾವಿಸಿಕೊಂಡು, ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಹೆಗ್ಗಡದೇವನಕೋಟೆ ತಾಲೂಕಿನ ತಹಶೀಲ್ದಾರರವರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ನವೀನ್' ಎಂದು ಭಾವಿಸಿಕೊಂಡು ಬೆಂಗಳೂರಿನ ಕೃಷ್ಣರಾಜಪುರಂನಲ್ಲಿ ವಾಸವಾಗಿರುವ ನಿಮ್ಮ ಗೆಳೆಯ 'ಚಂದನ್' ಎನ್ನುವವನಿಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ ಗಣರಾಜ್ಯೋತ್ಸವದ ಸಂಭ್ರಮವನ್ನು ಕುರಿತು ಪತ್ರ ಬರೆಯಿರಿ

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ.** **1*5=5**

45. ಸಾವಯವ ಕೃಷಿ

**ಅಥವಾ**

ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು.